ಕರ್ನಾಟಕ ವಿಧಾನಸಭೆ

ಬುಧವಾರ 30ನೇ ಡಿಸೆಂಬರ್ 1992, ಪುಷ್ಯ 9, 1914 ಶಕ ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 12.35 ಗಂಟೆಗೆ ಸಮಾವೇಶಗೊಂಡಿತು.

(ಉಪಾಧ್ಯಕ್ಷರು (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದ್ದರು.)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಉಪಾಧ್ಯಕ್ಷರು :– ಶ್ರೀಯುತ ಭೀಮಣ್ಣ ಖಂಡ್ರೆಯವರು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ ಅವರ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳುತ್ತೇನೆ. ಮೊದಲಿಗೆ ಶ್ರೀ ಬಸವರಾಜ ರಾಯರೆಡ್ಡಿಯವರು 59ನೇ ಸಂಖ್ಯೆಯ ಪ್ರಶ್ನೆ. ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ:– ಇದು ಬಹಳ ಪ್ರಮುಖ ಪ್ರಶ್ನೆ.

ಉಪಾಧ್ಯಕ್ಷರು:– ಅವರು ಬಂದ ಮೇಲೆ ತೆಗೆದುಕೊಳ್ಳೋಣ.

ಕೆ.ಎಸ್.ಆರ್.ಟಿ.ಸಿ. ರಟ್ಟೆಹಳ್ಳಿಯಲ್ಲಿ ಬಸ್ ನಿಲ್ದಾಣ ಕಟ್ಟಡದ ಬಗ್ಗೆ.

349 ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನ ರಟ್ಟೆಹಳ್ಳಿ ದೊಡ್ಡಗ್ರಾಮ ಮತ್ತು ಕೇಂದ್ರಗಳಲ್ಲಿ ಬಸ್ ನಿಲ್ದಾಣ ಕಟ್ಟಡದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಸ್ ನಿಲ್ದಾಣ ಕಟ್ಟಡಕ್ಕಾಗಿ ನಿವೇಶನ ಒದಗಿಸಲಾಗಿದೆಯೇ ಹಾಗೂ ಅದಕ್ಕಾಗಿ ಎಷ್ಟು ಹಣ ಒದಗಿಸಲಾಗಿದೆ ?

ಇ) ಹಾಗಿದ್ದಲ್ಲಿ, ಕಟ್ಟಡ ಕೆಲಸ ಪ್ರಾರಂಭಿಸಲು ವಿಳಂಬವೇಕೆ ?

ಈ) ಕಟ್ಟಡದ ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

ಉ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸ ಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಹೌದು

ಆ) ಹೌದು, ಉಚಿತವಾಗಿ ನೀಡಲಾಗಿದೆ.

ಇ) ಬಸ್ ನಿಲ್ದಾಣ ಕಟ್ಟಲು ನೀಡಿರುವ ಭೂಮಿಯು ಯೋಗ್ಯವಿರುವುದಿಲ್ಲವಾದ ಕಾರಣ ಸದಾ ನೀರು ನಿಲ್ಲುವ ಜಾಗವಾಗಿರುತ್ತದೆ ಮತ್ತು ಈ ಜಮೀನು ಕೆರೆಯ ಒಂದು ಭಾಗವಾಗಿರುತ್ತದೆ.

ಈ) ಬಸ್ ನಿಲ್ದಾಣಕ್ಕೆ ಸೂಕ್ತವಾದ ಜಮೀನನ್ನು ನಿಗಮದ ವಶಕ್ಕೆ ತೆಗೆದುಕೊಂಡು ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಉ) ಉದ್ಭವಿಸುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಹಿರೇಕೆರೂರು ತಾಲ್ಲೂಕಿನ ರಟ್ಟೆಹಳ್ಳಿ, ದೊಡ್ಡ ಗ್ರಾಮವೆಂದು, ಬಸ್ ನಿಲ್ದಾಣ ಕಟ್ಟಡಕ್ಕಾಗಿ ಒದಗಿಸಿರುವ ಜಾಗ ಉಚಿತವಾಗಿ ನೀಡಲಾಗಿರುವುದಾಗಿಯೂ ಒಪ್ಪಿಕೊಂಡಿದ್ದಾರೆ. ಆದರೆ ನಿಲ್ದಾಣ ಕಟ್ಟಲು ಭೂಮಿ ಯೋಗ್ಯವಾಗಿಲ್ಲವೆನ್ನುವ ಕಾರಣವನ್ನು ಈಗ ಹೇಳುತ್ತಿದ್ದಾರೆ. ಅಲ್ಲಿ ಉಚಿತವಾಗಿ ಭೂಮಿಯನ್ನು ಕೊಟ್ಟಾಗ ಇಲಾಖೆಯ ಅಧಿಕಾರಿಗಳು ಬಂದು ಸ್ಥಳ ಪರಿಶೀಲನೆ ಮಾಡಿ ಯೋಗ್ಯ ಇದೆ ಎಂದು ಹೇಳಿದ ಮೇಲೆ ಭೂಮಿ ಕೊಡಲಾಗಿದೆ. ಆಗ ಶಹಬಾಶ್‌ಗಿರಿ ತೆಗೆದುಕ್ಕೊಂಡಿದ್ದಾರೆ. ಈಗ ಆ ಕೆಲಸ ವಿಳಂಬ ಮಾಡುವುದಕ್ಕೆ ಹಾಗೂ ಕೆಲಸಕ್ಕೆ ಅವರೇ ಕಾರಣರಾಗಿದ್ದಾರೆ. ಇದನ್ನು ಮಾನ್ಯ ಸಚಿವರು ಸ್ವತಃ ಪರಿಶೀಲಿಸಬೇಕು. ತಾವು ಇನ್ನೊಮ್ಮೆ ಪರಿಶೀಲನೆ ಮಾಡಿ. ಇದಕ್ಕೆ 10 ಲಕ್ಷ ರೂಪಾಯಿ ಕೂಡ ಬಿಡುಗಡೆಯಾಗಿದೆ. 1989ರಲ್ಲಿ ಬಿ.ಜಿ. ಬಣಕಾರ್‌ರವರು ಫೌಂಡೇಷನ್ ಹಾಕಿದ್ದಾರೆ. ಇಂತಹ ಇಲಾಖೆಯಲ್ಲಿ ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡುವುದಕ್ಕೆ ಸೂಚಿಸಬೇಕು. ಮರು ಪರಿಶೀಲನೆ ಮಾಡಿ ಆ ಜಾಗದಲ್ಲಿ ಕಟ್ಟಡದ ಕೆಲಸ ಆಗಬೇಕೆಂದು ಹೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ಫೌಂಡೇಷನ್ ತೆಗೆಯುವಾಗ ಈ ಜಾಗ ಸರಿಯಿಲ್ಲವೆಂದು ಮುಖ್ಯ ಎಂಜಿನಿಯರ್‌ರವರು ಹೇಳಿದ್ದಾರೆ. ಫೌಂಡೇಷನ್‌ಗೆ ನೀರು ಬರುತ್ತದೆ, ಅಲ್ಲಿ ಕಟ್ಟಡ ಕಟ್ಟುವುದು ಆರೋಗ್ಯಕರವಲ್ಲ, 10 ಪಟ್ಟು ಹೆಚ್ಚು ಖರ್ಚು ಮಾಡಿ ಕಟ್ಟಡ ಕಟ್ಟಬೇಕಾಗುತ್ತದೆಂದು ವರದಿ ಹೇಳುತ್ತದೆ. ಆದ್ದರಿಂದ ಈ ವಿಚಾರದ ಬಗ್ಗೆ ಮತ್ತೊಂದು ಜಾಗವನ್ನು ಮಂಡಲ ಪಂಚಾಯಿತಿ ವತಿಯಿಂದ ಕೊಡಿಸಿದರೆ ಅಲ್ಲಿ ನಿಲ್ದಾಣ ಕಟ್ಟಿಸುತ್ತೇವೆ. ಇಲ್ಲಿ ಕಟ್ಟಿದರೆ ಹೆಲ್ತ್ ಪಾಯಿಂಟ್‌ನಿಂದ ಸರಿಯಿಲ್ಲವೆಂದು ರಿಪೋರ್ಟ್ ಆಗಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಉಪಾಧ್ಯಕ್ಷಿಣಿಯವರೇ ನಾನು ಹೇಳುತ್ತಿದ್ದೇನೆ, ಅಲ್ಲಿ ಹತ್ತು ಪಟ್ಟು ಹೆಚ್ಚು ಖರ್ಚು ಮಾಡುವ ಪ್ರಶ್ನೆಯಿಲ್ಲ. ಈಗಾಗಲೇ ಅಲ್ಲಿ ರಿಸರ್ವಾಯರ್ ಕಟ್ಟಿದೆ. ಫೌಂಡೇಶನ್ ವಿಚಾರವಾಗಿ ಹೇಳುವುದಾದರೆ ಅಲ್ಲಿ ಮೊರಮ್ ಸಾಯಿಲ್ ಇದೆ. ಸುತ್ತಮುತ್ತ ಎರೆ ಜಮೀನು ಇದೆ. ಅದು ಉತ್ತಮವಾದ ಜಾಗ. ಅಲ್ಲಿ ತಗ್ಗಿನಲ್ಲಿದ್ದಂತಹ ನೀರನ್ನು ಈಗಾಗಲೇ ಲೋಕೋಪಯೋಗಿ ಇಲಾಖೆಯವರು ಹೊರಗೆ ಕಳುಹಿಸಿದ್ದಾರೆ. ಬೆಂಗಳೂರಿನಲ್ಲಿ ಕೆರೆ ಹೊಂಡದಲ್ಲಿ ಕೇಂದ್ರ ಬಸ್ ನಿಲ್ದಾಣವನ್ನು ಮಾಡಿದ್ದಾರೆ. ಸಾರಿಗೆ ಇಲಾಖೆಯವರಿಗೆ ನಮ್ಮಲ್ಲಿ ಬಸ್‌ಸ್ಟ್ಯಾಂಡ್ ಮಾಡಿದರೆ ಹೆಚ್ಚು ಖರ್ಚಾಗುವುದಿಲ್ಲ. ಈಗಾಗಲೇ ಅಲ್ಲಿದ್ದ ನೀರನ್ನು ಹೊರಗೆ ಹಾಕಿದ್ದಾರೆ. ತಾವೇ ಬಂದು ಪರಿಶೀಲನೆ ಮಾಡಿರಿ. ನಾನು ಆ ಕ್ಷೇತ್ರದವನು ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ ನಾನು ಹೇಳುವುದು ಸರಿಯಿದ್ದರೆ ಯೋಗ್ಯವಿದ್ದರೆ ಆ ಕೆಲಸವನ್ನು ತೀವ್ರವಾಗಿ ತೆಗೆದುಕೊಂಡು ಆ ಕೆಲಸವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿ ಕೊಡಿರಿಯೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ನಾವು ಹೋಗಿ ನೋಡುವುದಲ್ಲ, ನಾವು ಹೋದರೆ ತಿಳಿಯುವುದಿಲ್ಲ. ಯಾರು ಎಕ್ಸ್‌ಪರ್ಟ್ಸ್ ಇದ್ದಾರೆ ಅವರು ಹೋಗಬೇಕು. ನಮ್ಮ ಚೀಫ್ ಇಂಜಿನಿಯರ್ ಬೇಕಾದರೆ ಮತ್ತೊಮ್ಮೆ ಕಳುಹಿಸುತ್ತೇನೆ. ತಾವೂ ಹೋಗಿ. ನಾಳೆ ನಾಡಿದ್ದರಲ್ಲಿ ಮಂತ್ರಿಗಳಾದ ಗೋಪಿನಾಥ ಸಾಂಡ್ರಾರವರು ಬರುತ್ತಿದ್ದಾರೆಂದು ಹೇಳುತ್ತಿದ್ದೀರಿ. ಅವರ ಜೊತೆಯಲ್ಲಿ ನಮ್ಮ ಅಧಿಕಾರಿಯನ್ನು ಕಳುಹಿಸುತ್ತೇನೆ. ಮತ್ತೊಮ್ಮೆ ವಿಮರ್ಶೆ ಮಾಡಿರಿ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮುಂದಿನ ತಿಂಗಳು ಮೂರನೆಯ ತಾರೀಖು ನಮ್ಮ ಜಿಲ್ಲೆಯ ಮಂತ್ರಿಗಳಾದ ಗೋಪಿನಾಥ ಸಾಂಡ್ರಾರವರು ಬರುತ್ತಾರೆ. ಅವರ ಜೊತೆಯಲ್ಲಿ ನಿಮ್ಮ ಅಧಿಕಾರಿಗಳನ್ನು ಕಳುಹಿಸಿ. ಅವರಿಗೆ ತೃಪ್ತಿಯಾದರೆ ನೀವು ಅಲ್ಲಿ ಬಸ್‌ಸ್ಟ್ಯಾಂಡ್ ಮಾಡಿ.

ಶ್ರೀ ಭೀಮಣ್ಣ ಖಂಡ್ರೆ:– ನಮ್ಮ ಮುಖ್ಯ ಇಂಜಿನಿಯರ್ ಸರಿಯೆಂದರೆ ಮಾಡುತ್ತೇವೆ. ಇಲ್ಲದಿದ್ದರೆ ಬೇರೆ ಸೈಟು ಕೊಡಿ.

ಮುಖ್ಯಮಂತ್ರಿಯವರ ಕಾರ್ಯಕ್ರಮದ ಬಗ್ಗೆ ಖರ್ಚಾಗಿರುವ ಹಣದ ಕುರಿತು.

207. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ವತಿಯಿಂದ ಮುಖ್ಯಮಂತ್ರಿಗಳ ಕಾರ್ಯಕ್ರಮಗಳ ಉದ್ಘಾಟನೆ: ಶಂಕುಸ್ಥಾಪನೆ ಇನ್ನಿತರ ಪ್ರಚಾರ ಕಾರ್ಯಕ್ಕಾಗಿ ಪತ್ರಿಕಾ ಜಾಹೀರಾತಿಗಾಗಿ ಕಳೆದ 9 ತಿಂಗಳಿಂದ ಖರ್ಚು ಮಾಡಿರುವ ಹಣವೆಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಳೆದ 9 ತಿಂಗಳಲ್ಲಿ ಮುಖ್ಯಮಂತ್ರಿಯವರು ನೆರವೇರಿಸಿದ ಬಸ್ ಘಟಕ ಮತ್ತು ಬಸ್ ನಿಲ್ದಾಣಗಳ ಶಂಕುಸ್ಥಾಪನಾ ಸಮಾರಂಭಗಳಿಗೆ ರೂ. 47,348–00 ಹಾಗೂ ಜಾಹೀರಾತಿಗಾಗಿ ರೂ. 71,800–00ಗಳನ್ನು ವೆಚ್ಚ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಉಪಾಧ್ಯಕ್ಷೆಣಿಯವರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಳೆದ 9 ತಿಂಗಳಿನಲ್ಲಿ ಮುಖ್ಯಮಂತ್ರಿಯವರು ನೆರವೇರಿಸಿದ ಬಸ್ ಘಟಕ ಮತ್ತು ಬಸ್‌ನಿಲ್ದಾಣಗಳ ಶಂಕುಸ್ಥಾಪನಾ ಸಮಾರಂಭಗಳಿಗೆ ರೂಪಾಯಿ 47,348 ಹಾಗೂ ಜಾಹೀರಾತಿಗಾಗಿ ರೂಪಾಯಿ 71,800 ವೆಚ್ಚ ಮಾಡಲಾಗಿದೆಯೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಯಮಾವಳಿ ಪ್ರಕಾರ ಈ ರೀತಿ ಮುಖ್ಯಮಂತ್ರಿಗಳು ಬೇರೆ ಬೇರೆ ಕಾರ್ಯಕ್ರಮಗಳಿಗೆ ಹೋದಾಗ ಜಾಹೀರಾತಿಗಾಗಿ ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶ ಇದೆಯೆ ? ಹಿಂದಿನ ಸಾರಿಗೆ ಸಚಿವರಾದ ಅಜೀಜ್ ಸೇಠ್‌ರವರು ಕಾನೂನು ಬಾಹಿರವಾಗಿ ನನ್ನ ಗಮನಕ್ಕೆ ತರದೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಅದಕ್ಕೆ ನಾನು ಅನುಮತಿಯನ್ನು ಕೊಟ್ಟಿಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೆ ? ರೂಪಾಯಿ 71,800ನ್ನು ಯಾವ ಕಾರ್ಯಕ್ರಮಕ್ಕಾಗಿ ಖರ್ಚು ಮಾಡಿದ್ದಾರೆನ್ನುವುದನ್ನು ಸ್ಪೆಸಿಫಿಕ್ ಆಗಿ ಹೇಳುತ್ತೀರಾ ?

ಶ್ರೀ ಭೀಮಣ್ಣ ಖಂಡ್ರೆ:– ದಿನಾಂಕ ,2–5–92ರಂದು ಬಿಜಾಪುರ ಡಿವಿಜನ್‌ನಲ್ಲಿ ಮಡವಿ ಬಸ್‌ನಿಲ್ದಾಣ ಶಂಕುಸ್ಥಾಪನೆ ಮಾಡಲಿಕ್ಕೆ ಮುಖ್ಯಮಂತ್ರಿಗಳು ಹೋಗಿದ್ದರು ಅದಕ್ಕಾಗಿ ಖರ್ಚಾಗಿರುವುದು 24,886 ರೂಪಾಯಿ. ಅದೇ ರೀತಿ ಕುಣಿಗಲ್ ಬಸ್‌ಸ್ಟ್ಯಾಂಡ್ ಅಡಿಗಲ್ಲು ಸಮಾರಂಭಕ್ಕೆ ಮುಖ್ಯಮಂತ್ರಿಗಳು ಹೋಗಿದ್ದರು. ಅದು ದಿನಾಂಕ 5–5–92ರಂದು. ಅಲ್ಲಿ ಖರ್ಚಾಗಿರುವುದು 9,547 ರೂಪಾಯಿ. ರಾಯಚೂರು ಡಿವಿಜನ್, ಕನಕಗಿರಿ ಅಲ್ಲಿಗೆ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ 28–5–92ರಂದು ಮುಖ್ಯಮಂತ್ರಿಗಳು ಹೋಗಿದ್ದಾರೆ. ಅದಕ್ಕಾಗಿ ಖರ್ಚಾಗಿರುವುದು 7,085 ರೂಪಾಯಿ. ಬಳ್ಳಾರಿ ಬಸ್ ನಿಲ್ದಾಣಕ್ಕೆ ಅಡಿಗಲ್ಲು ಸಮಾರಂಭಕ್ಕೆ ಮುಖ್ಯಮಂತ್ರಿಗಳು ದಿನಾಂಕ 25–9–92ರಂದು ಹೋಗಿದ್ದಾರೆ. ಅಲ್ಲಿ ಏನೂ ಖರ್ಚಾಗಿಲ್ಲ. ಹೊಸಕೋಟೆ ಬಸ್ ಡಿಪೋ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ 1–10–92ರಂದು ಹೋಗಿದ್ದಾರೆ.